C.R.P.67

Form No.4 (Civil)
Deposition Sheets
(R.P.No.57)

**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸ್ಪೆಷಲ್ ಸಿ. ಸಂಖ್ಯೆಃ **49/2020**

ಪ್ರಾಸಾ.**06** ಚಾಸಾ.**06**

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವರಾಜು |
| ತಂದೆಯ ಹೆಸರು | : | ಎಳೆಚಿತ್ತಪ್ಪ. |
| ವಯಸ್ಸು | : | 48 ವರ್ಷಗಳು |
| ಉದ್ಯೋಗ | : | ವ್ಯವಸಾಯ. |
| ವಾಸ | : | ದೊಡ್ಡಗೊಲ್ಲರ ಹಟ್ಟಿ, ಮಧುಗಿರಿ ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ **02.12.2024.**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಮೃತ ಮರಿಯಣ್ಣ ಗೊತ್ತು. ಚಾ.ಸಾ.1 ಗೊತ್ತು. ದಿನಾಂಕ 26.08.2018 ರಂದು ಚಾ.ಸಾ.1 ರವರು ನನಗೆ ಕರೆ ಮಾಡಿ ತನ್ನ ತಮ್ಮ ಮರಿಯಣ್ಣ ಕಾಣೆಯಾಗಿದ್ದಾನೆ, ಪೋಲೀಸರಿಗೆ ದೂರು ಕೊಡಬೇಕು ಬನ್ನಿ ಎಂದು ತಿಳಿಸಿದ. ಆಗ ನಾನು ಹೊಸಹಳ್ಳಿಗೆ ಬಂದೆ. ನನ್ನ ಜೊತೆ 4-5 ಜನ ಬಂದಿದ್ದರು. ನಂತರ ನಾನು, ಚಾ.ಸಾ.1 ಮತ್ತು ನನ್ನ ಜೊತೆ ಬಂದಿದ್ದ ವ್ಯಕ್ತಿಗಳು ಪೋಲೀಸ್ ಠಾಣೆಗೆ ಹೋದೆವು. ಪೋಲೀಸ್ ಠಾಣೆಗೆ ತಹಸೀಲ್ದಾರ್ ರವರು ಬಂದಿದ್ದರು. ಪೋಲೀಸ್ ಠಾಣೆಗೆ ಪೋಲೀಸರು ಮುನಿಯ ಎಂಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು.

2. ನಂತರ ಸದರಿ ಮುನಿಯ ನಮ್ಮಗಳನ್ನು, ತಹಸೀಲ್ದಾರ್ ರವರನ್ನು ಹಾಗೂ ಪೋಲೀಸರನ್ನು ಹೊಸಹಳ್ಳಿ ಪಕ್ಕದಲ್ಲಿರುವ ಕೆರೆಯ ಬಳಿಗೆ ಕರೆದುಕೊಂಡು ಹೋದನು. ಸದರಿ ಸ್ಥಳದಲ್ಲಿ ಮುನಿಯ ಪೋಲೀಸರು, ತಹಸೀಲ್ದಾರ್ ಹಾಗೂ ನಮಗೆ ಶವ ಹೂತುಹಾಕಿದ್ದ ಸ್ಥಳವನ್ನು ತೋರಿಸಿದನು. ನಂತರ ಪೋಲೀಸರು ಹುಡುಗರ ಕೈಯಲ್ಲಿ ಮಣ್ಣಿನಲ್ಲಿ ಹೂತಿದ್ದ ಶವವನ್ನು ಹೊರತೆಗೆಸಿದರು. ಶವವನ್ನು

ಹೊರತೆಗೆದಾಗ ಶವ ಕೊಳತು ಹೋಗಿತ್ತು ಹಾಗೂ ವಾಸನೆ ಬರುತ್ತಿತ್ತು. ಶವದ ಮುಖ ಕೊಳೆತು ಹೋಗಿತ್ತು. ಬಲಗಾಲು ಮತ್ತು ಬಲ ಪಕ್ಕೆಯಲ್ಲಿ ಸುಟ್ಟಗಾಯಗಳಾಗಿದ್ದವು. ತಹಸೀಲ್ದಾರ್ ರವರು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ, ಬೆರಳಚ್ಚು ಮಾಡಿರುವ ವಿಷಯವನ್ನು ನಮಗೆ ಓದಿ ತಿಳಿಸಿದರು.

3. ಶವದ ಮೇಲೆ ಬಟ್ಟೆಗಳಿದ್ದವು. ಒಂದು ಸೊನಾಟಾ ವಾಚು ಮತ್ತು ಮೊಬೈಲ್ ಇತ್ತು. ನನಗೆ ತಿಳಿದು ಬಂದ ವಿಚಾರವೇನೆಂದರೆ ಆರೋಪಿ ಮುನಿಯ ಹಂದಿ ಬೇಟೆ ಮಾಡಲು ವಿದ್ಯುತ್ ತಂತಿಯನ್ನು ದೇವಸ್ಥಾನದ ಬಳಿ ಬಿಟಿದ್ದು ಆ ಸಮಯದಲ್ಲಿ ಮೃತ ಮರಿಯಣ್ಣ ಮೊಬೈಲ್ ಚಾರ್ಜ್ ಮಾಡಲು ಸದರಿ ಸ್ಥಳದ ಹತ್ತಿರ ಹೋದಾಗ ವಿದ್ಯುತ್ ಸ್ಪರ್ಷ ಆಗಿ ಬಲಗಾಲು ಮತ್ತು ಬಲ ಪಕ್ಕೆಯ ಬಳಿ ಗಾಯ ಆಗಿ ಮೃತಪಟ್ಟಿರುತ್ತಾನೆ ಎಂದು ಗೊತ್ತಾಯಿತು. ನಂತರ ಮೃತ ಮರಿಯಣ್ಣನ ಶವವನ್ನು ಆರೋಪಿ ಮುನಿಯ ಸದರಿ ಕೆರೆಯಲ್ಲಿ ಹೂತಾಕಿರುತ್ತಾನೆ ಎಂದು ನನಗೆ ಗೊತ್ತಾಯಿತು.

4. ಈಗ ತೋರಿಸಿದ ನಿ.ಪಿ-4 ಮೃತ ಮರಿಯಣ್ಣನ ಫೋಟೋ ಆಗಿರುತ್ತದೆ. ಈಗ ತೋರಿಸಿದ ನಿ.ಪಿ-7 ರಿಂದ 24 ಫೋಟೋಗಳು ಕೆರೆಯ ಬಳಿ ತೆಗೆದ ಫೋಟೋಗಳಾಗಿರುತ್ತವೆ. 6 ನೇ ಆರೋಪಿ ಮುನಿಯನನ್ನು ನೋಡಿದರೆ ಗುರುತಿಸಬಲ್ಲೆ. 6 ನೇ ಆರೋಪಿ ಮುನಿಯ ಈದಿವಸ ನ್ಯಾಯಾಲಯದ ಮುಂದೆ ಇರುತ್ತಾನೆ. ಸಾಕ್ಷಿ 6 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಆ ದಿವಸ ಮಧ್ಯಾಹ್ನ 1-45 ರಿಂದ ಸಂಜೆ 4-45 ಗಂಟೆ ವರೆಗೆ ಮಾಡಿರುತ್ತಾರೆ. ಸ್ಥಳದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವಸ್ತುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ ಮು.ಮಾ-8 ಎಂದು ಗುರುತಿಸಲಾಗಿದೆ.

**(**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಷಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ**.** ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ**.** ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

5. ಮೃತ ಮರಿಯಣ್ಣನ ಶವವನ್ನು ಉಜ್ಜನಿ ಗ್ರಾಮದ ಗೌರಮ್ಮನ ಕೆರೆ ಬಳಿ ಹೂತುಹಾಕಿದ್ದರು ಎಂದರೆ ಸರಿ. ಆರೋಪಿತರು ಹಂದಿ ಬೇಟೆಗಾಗಿ ಕಾಮೇನಹಳ್ಳಿ ಶ್ರೀ ಗುಟ್ಟೆ ನರಸಿಂಹಸ್ವಾಮಿ ದೇವಸ್ಥಾನದ ಸಮುದಾಯ ಭವನದ ಹಿಂಭಾಗದ ಜಮೀನಿನಲ್ಲಿ ವಿದ್ಯುತ್ ತಂತಿಯನ್ನು ಅಳವಡಿಸಿದ್ದರು ಎಂದರೆ ಸರಿ.

ಪಾಟೀ ಸವಾಲುಃ ಶ್ರೀ. ಪಿ. ವೈ. ಆರ್, ವಕೀಲರಿಂದ **– 2, 3, 7** ಹಾಗೂ **8** ನೇ ಆರೋಪಿತರ ಪರವಾಗಿಃ

6. ಚಾ.ಸಾ.1 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಆ ದಿವಸ ನಾನು ನನ್ನ ಗ್ರಾಮವನ್ನು ಬೆಳಗ್ಗೆ 9-00 ರಿಂದ 9-30 ಗಂಟೆಗೆ ಬಿಟ್ಟಿರುತ್ತೇನೆ. ಆ ದಿವಸ ಹೊಸಹಳ್ಳಿ ಪೋಲೀಸರ್ ಠಾಣೆಗೆ ಬೆಳಗ್ಗೆ 11-30 ಗಂಟೆಗಗೆ ಬಂದಿರುತ್ತೇನೆ. ನಾವು 11-30 ಇಂದ ಮಧ್ಯಹ್ನ 1-00 ಗಂಟೆ ವರೆಗೂ ಪೋಲೀಸ್ ಠಾಣೆಯಲ್ಲೇ ಇದ್ದೆವು. ನನ್ನ ಜೊತೆ ಪೋಲೀಸ್ ಠಾಣೆಯಲ್ಲಿ ಚಾ.ಸಾ.1, ನನ್ನ ಜೊತೆಯಲ್ಲಿ ಬಂದಿದ್ದ ಹುಡುಗರು ಇದ್ದರು. ನಮ್ಮಗಳನ್ನು ಹೊರತುಪಡಿಸಿ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಇನ್ಸ್ ಪೆಕ್ಟರ್ ಇದ್ದರು ಮತ್ತು ತಹಸೀಲ್ದಾರ್ ರವರು ಠಾಣೆಗೆ ಮಧ್ಯಾಹ್ನ 1-30 ಗಂಟೆಗೆ ಬಂದರು. ತಹಸೀಲ್ದಾರ್ ರವರು ಬಂದ ಮೇಲೆ ನಮ್ಮನ್ನು ಕೆರೆ ಬಳಿ ಕರೆದುಕೊಂಡು ಹೋದರು. ತಹಸೀಲ್ದಾರ್ ರವರು ಬಂದ ಮೇಲೆ ನಾವುಗಳು ಮೊದಲ ಬಾರಿಗೆ ಸದರಿ ಕೆರೆ ಬಳಿ ಹೋಗಿರುತ್ತೇವೆ ಎಂದರೆ ಸರಿ. ಪೋಲೀಸರು ಹಾಗೂ ತಹಸೀಲ್ದಾರ್ ರವರು ಜೀಪಿನಲ್ಲಿ ಹೋದರು ಮತ್ತು ನಾವುಗಳು ಬೇರೆ ವಾಹನದಲ್ಲಿ ಸದರಿ ಸ್ಥಳಕ್ಕೆ ಹೋದೆವು.

7. ಕೆರೆಯ ಬಳಿ ಸಂಜೆ 1-45 ರಿಂದ 4-45 ಗಂಟೆವರೆಗೆ ಇದ್ದೆವು. ಶವದ ಮರಣೋತ್ತರ ಪರೀಕ್ಷೆಯನ್ನು ಸ್ಥಳದಲ್ಲೇ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಂಜೆ 4-45 ಗಂಟೆ ನಂತರ ನಾನು ನನ್ನ ಗ್ರಾಮಕ್ಕೆ ಹೋದೆ. ಸಂಜೆ 4-45 ಗಂಟೆ ಆದ ಮೇಲೆ ನಾನು ಪೋಲೀಸ್ ಠಾಣೆಗೆ ವಾಪಸ್ಸು ಹೋಗಿ ದಾಖಲೆಗಳಿಗೆ ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿ ನಂತರ ಊರಿಗೆ ಹೋಗಿರುತ್ತೇನೆ. ಸದರಿ ಸ್ಥಳದಲ್ಲಿ ಪೋಲೀಸರು ನನ್ನನ್ನು ವಿಚಾರಿಸಿರುವುದಿಲ್ಲ ಎಂದರೆ ಸರಿ.

8. ಈ ಪ್ರಕರಣದ ವಿಚಾರವನ್ನು ಚಾ.ಸಾ.1 ರವರು ಮತ್ತು ಪೋಲೀಸರು ಮತ್ತು ತಹಸೀಲ್ದಾರ್ ರವರು ತಿಳಿಸಿದ್ದರಿಂದ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಸ್ಥಳದಲ್ಲಿ ತಹಸೀಲ್ದಾರ್ ರವರು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ಅವರಿಗೆ ಯಾವುದೇ ವಿಚಾರವನ್ನು ಹೇಳಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ

ಸರಿ. ನಾನು ಸದರಿ ಕೆರೆ ಬಳಿ ಹೋಗಿರುವುದಿಲ್ಲ, ನನ್ನ ಸಮಕ್ಷಮ ಶವವನ್ನು ಹೊರತೆಗೆದಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲೆಗಳಿಗೆ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು 6 ನೇ ಆರೋಪಿಯನ್ನು ಮೊದಲ ಬಾರಿಗೆ ಇಂದು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಯಾವುದೇ ವಿಚಾರ ಗೊತ್ತಿರುವುದಿಲ್ಲ, ನನ್ನ ಸಮಕ್ಷಮ 6 ನೇ ಆರೋಪಿ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ.1 ರವರು ಒಂದೇ ಗ್ರಾಮ ಹಾಗೂ ಒಂದೇ ಸಮುದಾಯದವರಾದ ಕಾರಣ ಅವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀಮತಿ**. ಎಸ್.ಪಿ, ವಕೀಲರಿಂದ – 1, 4 ರಿಂದ 6, 9 ಹಾಗೂ 1** ನೇ ಆರೋಪಿತರ ಪರವಾಗಿಃ

ಶ್ರೀಮತಿ ಎಸ್.ಪಿ ವಕೀಲರು 2, 3, 7 ಹಾಗೂ 8 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ**.**

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.